ಅಧ್ಯಕ್ಷರು. —ಆಶಾದಾಯಕವಾದ ಉತ್ತರ ಕೊಡಿ.

ಶ್ರೀ ಹೆಚ್. ಡಿ. ದೇವೇಗೌಡ.—ಆಶಾದಾಯಕವಾದ ಉತ್ತರ ಕೊಡಬೇಕು ಎಂದೇ ಪ್ರಯತ್ನ ಮಾಡುತ್ತೇವೆ ಎಂದು ಹೇಳಿದೆ. ಇದಕ್ಕೆ ಇತಿಹಾಸ ಇದೆ ಇದು ಮಂಜೂರಾತಿ ಆಗುವುದಕ್ಕೆ ಮುಂಚೆ ೧೯೭೯ ರಲ್ಲಿ ಕೆಲಸ ಶುರುವಾಡಿ ೧ ಲಕ್ಷ ೩೦ ಸಾವಿರ ಖರ್ಚುಮಾಡಿ ಅದು ಆಮೇಲೆ ನಿಂತುಹೋಗಿದೆ, ವರ್ಕ್ ಅಬಾಂಡನ್ ಮಾಡಬೇಕು ಎನ್ನುವ ಸ್ಟೇಜ್‌ಗೆ ಬಂದಾಗ ಸದನದಲ್ಲಿ ಅವರೇ ಒತ್ತಾಯ ಮಾಡಿದ ಮೇಲೆ ಸ್ಥಳ ಪರಿಶೀಲನೆ ಮಾಡಿ ೬೪ ಎಕರೆ ಮುಳುಗಡೆಯಾಗತಕ್ಕಂಥ ಫಾರೆಸ್ಟ್ ಲ್ಯಾಂಡ್‌ಗೆ ಪರ್ಯಾಯವಾಗಿ ರೆವಿನ್ಯೂ ಸೀಡಗಿ ಲ್ಯಾಂಡ್ ಕೊಡುತ್ತೇವೆ ಎಂದು ಫಾರೆಸ್ಟ್ ಡಿಪಾರ್ಟ್‌ಮೆಂಟ್‌ಗೆ ಹೇಳಿ, ಅಲ್ಲಿ ಆಲ್ಟರ್ನೇಟೀವಾಗಿ ಫಾರೆಸ್ಟ್ ಬೆಳಿಸಿ ಎಂದು ಹೇಳಿ. ಇಷ್ಟೆಲ್ಲಾ ಮಾಡಿ ಎಷ್ಟೆಷ್ಟು ಕ್ರಮ ತೆಗೆದುಕೊಳ್ಳಬೇಕೋ ಅಷ್ಟನ್ನು ಮಾಡಿದ್ದೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಈ ವರ್ಷವಾದರೂ ಅದನ್ನು ಪ್ರಾರಂಭ ಮಾಡುವುದಕ್ಕೆ ಪೂರ್ಣ ಪ್ರಯತ್ನ ತಮ್ಮ ಕಡೆಯಿಂದ ಆಗುತ್ತದೆಯೇ ಸ್ವಾಮಿ ?

ಶ್ರೀ ಹೆಚ್. ಡಿ ದೇವೇಗೌಡ —ಕೇಂದ್ರ ಸರ್ಕಾರದಿಂದ ಫಾರೆಸ್ಟ್ ಲ್ಯಾಂಡ್ ಮುಳುಗಡೆಯಾಗುವುದಕ್ಕೆ ಪರವಾನಗಿಬೇಕು. ಅದಕ್ಕೋಸ್ಕರ ನಾವು ಬೇರೆ ಆಲ್ಟರ್ನೇಟೀವ್ ಲ್ಯಾಂಡ್ ಕೊಡುತ್ತೇವೆ. ಹಣ ಕೊಡುತ್ತೇವೆ ಎಂದೆಲ್ಲಾ ಹೇಳಿದ್ದೇವೆ ಕೇಂದ್ರ ಸರ್ಕಾರದಿಂದ ಸಮ್ಮತಿ ಸಿಗಬಹುದು ಎಂದು ಆಸೆ ಇಟ್ಟು ಕೊಂಡಿದ್ದೇವೆ, ಸಿಕ್ಕಿದ ನಂತರ ಪ್ರಾರಂಭ ಮಾಡುತ್ತೇವೆ.

## ಉತ್ತರ ಕನ್ನಡ ಜಿಲ್ಲೆಯಲ್ಲಿ ಗಂಗಾಕಲ್ಯಾಣ ಯೋಜನೆ ಬಗ್ಗೆ

೫೧. ಶ್ರೀ ಗೋಪಾಲಮೂಕಾಂದ ಕಾನಡೆ (ಸಿರ್ಸಿ) ಮಾನ್ಯ ಲೋಕೋಪಯೋಗಿ, ಆಚ್ಚುಕಟ್ಟು ಪ್ರದೇಶಾಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಗಂಗಾಕಲ್ಯಾಣ ಯೋಜನೆಯಡಿಯಲ್ಲಿ ಮಂಜೂರಾದ ಯೋಜನೆಗಳಾವುವು ?

ಆ) ಸಿರ್ಸಿ ಸಿದ್ದಾಪುರ ತಾಲ್ಲೂಕಿನಲ್ಲಿ ಮಂಜೂರಾದ ಯೋಜನೆಗಳಾವುವು ?

ಇ) ಸದರಿ ಯೋಜನೆಗಳ ಮಂಜೂರಾತಿ ಬಗ್ಗೆ ತಾಲ್ಲೂಕಿನ ಜನತೆಯಿಂದ ಬೇಡಿಕೆಗಳೇನಾದರೂ ಸರ್ಕಾರದವರಿಗೆ ಬಂದಿವೆಯೇ ?

ಈ) ಹಾಗಿದ್ದಲ್ಲಿ, ಸದರಿ ಯೋಜನೆಯನ್ನು ಅನುಷ್ಠಾನಕ್ಕೆ ತರದೇ ಇರಲು ಕಾರಣಗಳೇನು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಮಂಜೂರಾದ ಯೋಜನೆಗಳು ೩೦. ವಿವರಗಳನ್ನು ಲಗತ್ತಿಸಿದೆ (ಪಟ್ಟಿ–೧)

ಆ) ಸಿರ್ಸಿ ಮತ್ತು ಸಿದ್ದಾಪುರ ತಾಲ್ಲೂಕಿನಲ್ಲಿ ೧೧ ಯೋಜನೆಗಳು ಮಂಜೂರಾಗಿದೆ. ಪಟ್ಟಿ–೨ರಲ್ಲಿ ವಿವರಿಸಲಾಗಿದೆ.

ಇ) ಹೌದು

ಈ) ಯೋಜನೆಗಳು ಅನ್ವೇಷಣೆಯ ಹಂತದಲ್ಲಿವೆ.

ಪಟ್ಟಿ—೧

ಉತ್ತರ ಕನ್ನಡ ಜಿಲ್ಲೆಯಲ್ಲಿ ಮುಂಜೂರಾಗಿರುವ ಗಂಗಾ ಕಲ್ಯಾಣ ಯೋಜನೆಗಳು

| ಕ್ರಮ ಸಂಖ್ಯೆ | ಯೋಜನೆಯ ಹೆಸರು<br>ಪ್ರವರ್ಗ-೧ | ಅಂದಾಜು ವೆಚ್ಚ ಲಕ್ಷ ರೂಗಳಲ್ಲಿ | ಅಚ್ಚುಕಟ್ಟು ಆಗುವ ಪ್ರದೇಶ ಹೆಕ್ಟೇರ್ |
|---|---|---|---|
| ೧ | ೨ | ೩ | ೪ |
| ೧ | ಅಂಕೋಲಾ ತಾಲ್ಲೂಕಿನ ಅಚವೆ ಗ್ರಾಮದಲ್ಲಿ ಕೊಳವೆ ಬಾವಿ ನಿರ್ಮಾಣ | ೦.೮೫ | ೬.೦೦ |
| ೨ | ಮುಂಡಗೋಡ ತಾಲ್ಲೂಕಿನ ತಮ್ಮಯ್ಯನ ಕೊಪ್ಪದಲ್ಲಿ ಕೊಳವೆ ಬಾವಿ ನಿರ್ಮಾಣ | ೦.೯೦ | ೭.೦೦ |
| ೩ | ಸುಪಾ ತಾಲ್ಲೂಕಿನ ಮಾವಲಿಂಗೆ ಗ್ರಾಮದಲ್ಲಿ ಕೊಳವೆ ಬಾವಿ ನಿರ್ಮಾಣ | ೧.೫೭ | ೧೩.೦೦ |
| ೪ | ಮುಂಡಗೋಡ ತಾಲ್ಲೂಕಿನಲ್ಲಿ ನಂದಿ ಗ್ರಾಮದಲ್ಲಿ ಕೊಳವೆ ಬಾವಿ ನಿರ್ಮಾಣ | ೧.೦೨ | ೬.೦೦ |
| ೫ | ಸುಪಾ ತಾಲ್ಲೂಕಿನ ರಾಮನಗರದಲ್ಲಿ ಕೊಳವೆ ಬಾವಿ ನಿರ್ಮಾಣ | ೧.೭೧ | ೪೫.೦೦ |
| ೬ | ಮುಂಡಗೋಡ ತಾಲ್ಲೂಕಿನ ಸರ್ವೆ ನಂ ೭೦ ಅಗಡಿ ಗ್ರಾಮದಲ್ಲಿ ಕೊಳವೆ ಬಾವಿ ನಿರ್ಮಾಣ | ೦.೯೫ | ೭.೦೦ |
| ೭ | ಮುಂಡಗೋಡ ತಾಲ್ಲೂಕಿನ ಸರ್ವೆನಂ. ೨೭ರ ಅಗಡಿ ಗ್ರಾಮದಲ್ಲಿ ಕೊಳವೆ ಬಾವಿ ನಿರ್ಮಾಣ | ೦.೯೫ | ೭.೦೦ |
| ೮ | ಮುಂಡಗೋಡ ತಾಲ್ಲೂಕಿನ ಸರ್ವೆನಂ. ೯ರ ಅಗಡಿ ಗ್ರಾಮದಲ್ಲಿ ಕೊಳವೆ ಬಾವಿ ನಿರ್ಮಾಣ | ೦.೯೫ | ೧೮.೦೦ |
| ೯ | ಮುಂಡಗೋಡ ತಾಲ್ಲೂಕಿನ ಸರ್ವೆನಂ. ೧೨ರ ತಮ್ಮಯ್ಯನ ಕೊಪ್ಪದಲ್ಲಿ ಕೊಳವೆ ಬಾವಿ ನಿರ್ಮಾಣ | ೦.೯೫ | ೮.೦೦ |
| ೧೦ | ಮುಂಡಗೋಡ ತಾಲ್ಲೂಕಿನ ಸರ್ವೆನಂ. ೧೪ರ ನಾಗನೂರಿನಲ್ಲಿ ಕೊಳವೆ ಬಾವಿ ನಿರ್ಮಾಣ | ೦.೯೮ | ೮.೦೦ |
| ೧೧ | ಮುಂಡಗೋಡ ತಾಲ್ಲೂಕಿನ ಸರ್ವೆನಂ. ೧೮ ನಾಗನೂರಿನಲ್ಲಿ ಕೊಳವೆ ಬಾವಿ ನಿರ್ಮಾಣ | ೦.೯೦ | ೧೫.೦೦ |
| ೧೨ | ಮುಂಡಗೋಡ ತಾಲ್ಲೂಕಿನ ಸರ್ವೆನಂ. ೭೫ರ ಹನುಮಾಪುರದಲ್ಲಿ ಕೊಳವೆ ಬಾವಿ ನಿರ್ಮಾಣ | ೦.೯೫ | ೧೧.೦೦ |
| ೧೩ | ಮುಂಡಗೋಡ ತಾಲ್ಲೂಕಿನ ಸರ್ವೆನಂ. ೫೫ರ ಹನುಮಾಪುರದಲ್ಲಿ ಕೊಳವೆ ಬಾವಿ ನಿರ್ಮಾಣ | ೦.೯೫ | ೧೧.೦೦ |
| ೧೪ | ಮುಂಡಗೋಡ ತಾಲ್ಲೂಕಿನ ಸರ್ವೆನಂ. ೪೮ರ ಕಾದಂರುಗೆಯಲ್ಲಿ ಕೊಳವೆ ಬಾವಿ ನಿರ್ಮಾಣ | ೦.೯೦ | ೯.೦೦ |

| ೧ | ೨ | ೩ | ೪ |
|---|---|---|---|
| ೧೫ | ಹಳಿಯಾಳ ತಾಲ್ಲೂಕಿನ ಮಾಗವಾಡ ಗ್ರಾಮದಲ್ಲಿ ಕೊಳವೆ ಬಾವಿ ನಿರ್ಮಾಣ | ೦.೭೫ | ೬.೦೦ |
| ೧೬ | ಹಳಿಯಾಳ ತಾಲ್ಲೂಕಿನ ಹಲಸಿ ಗ್ರಾಮದಲ್ಲಿ ಕೊಳವೆ ಬಾವಿ ನಿರ್ಮಾಣ | ೦.೮೦ | ೬.೦೦ |
| ೧೭ | ಶಿರಸಿ ತಾಲ್ಲೂಕಿನ ಸರ್ವೆನಂ, ೧೪೭ರ ಇಸ್ಲೂರಿ ಗ್ರಾಮದಲ್ಲಿ ಕೊಳವೆ ಬಾವಿ ನಿರ್ಮಾಣ | ೦.೯೫ | ೬.೮೦ |
| ೧೮ | ಶಿರಸಿ ತಾಲ್ಲೂಕಿನ ಸರ್ವೆನಂ. ೪೮ ಗೋಣೂರು ಗ್ರಾಮದಲ್ಲಿ ಕೊಳವೆ ಬಾವಿ ನಿರ್ಮಾಣ | ೦.೯೮ | ೬.೮೦ |
| ೧೯ | ಶಿರಸಿ ತಾಲ್ಲೂಕಿನ ಸರ್ವೆ ನಂ. ೨೭ ವಡ್ಡಲಿ ಗ್ರಾಮದಲ್ಲಿ ಕೊಳವೆ ಬಾವಿ ನಿರ್ಮಾಣ | ೦.೯೪ | ೬.೦೦ |
| ೨೦ | ಶಿರಸಿ ತಾಲ್ಲೂಕಿನ ಸರ್ವೆನಂ. ೬೨ ಕಿರವತ್ತಿ ಗ್ರಾಮದಲ್ಲಿ ಕೊಳವೆ ಬಾವಿ ನಿರ್ಮಾಣ | ೦.೯೪ | ೬.೮೦ |
| ೨೧ | ಯಲ್ಲಾಪುರ ತಾಲ್ಲೂಕಿನ ಸರ್ವೆನಂ. ೧೨ ಮದ್ಮರು ಗ್ರಾಮದಲ್ಲಿ ಕೊಳವೆ ಬಾವಿ ನಿರ್ಮಾಣ | ೦.೯೬ | ೬.೫೦ |
| ೨೨ | ಯಲ್ಲಾಪುರ ತಾಲ್ಲೂಕಿನ ಸರ್ವೆನಂ. ೮೬ ಕಂಡನಹಳ್ಳಿ ಗ್ರಾಮದಲ್ಲಿ ಕೊಳವೆ ಬಾವಿ ನಿರ್ಮಾಣ | ೦.೯೬ | ೬.೦೦ |
| ೨೩ | ಶಿರಸಿ ತಾಲ್ಲೂಕಿನ ಸರ್ವೆನಂ. ೩೯ ಅಚನಳ್ಳಿ ಗ್ರಾಮದಲ್ಲಿ ಕೊಳವೆ ಬಾವಿ ನಿರ್ಮಾಣ | ೦.೯೪ | ೬.೦೦ |
| ೨೪ | ಶಿರಸಿ ತಾಲ್ಲೂಕಿನ ಸರ್ವೆನಂ. ೪೩. ಕಲ್ಲಕಡ್ಡಿ ಗ್ರಾಮದಲ್ಲಿ ಕೊಳವೆ ಬಾವಿ ನಿರ್ಮಾಣ | ೦.೯೬ | ೬.೦೦ |
| ೨೫ | ಶಿರಸಿ ತಾಲ್ಲೂಕಿನ ಸರ್ವೆ ನಂ. ೨೭ ಬೆಳ್ಳನಕೇರಿ ಗ್ರಾಮದಲ್ಲಿ ಕೊಳವೆ ಬಾವಿ ನಿರ್ಮಾಣ | ೦.೯೮ | ೬.೫೦ |
| ೨೬ | ಶಿರಸಿ ತಾಲ್ಲೂಕಿನ ಸರ್ವೆನಂ. ೩೯ ಬೆಳ್ಳನಕೇರಿ ಗ್ರಾಮದಲ್ಲಿ ಕೊಳವೆ ಬಾವಿ ನಿರ್ಮಾಣ | ೦.೯೮ | ೭.೦೦ |
| ೨೭ | ಶಿರಸಿ ತಾಲ್ಲೂಕಿನ ನಂ. ೮ ತಿಗಣಿ ಗ್ರಾಮದಲ್ಲಿ ಕೊಳವೆ ಬಾವಿ ನಿರ್ಮಾಣ | ೦.೯೪ | ೬.೦೦ |
| ೨೮ | ಶಿರಸಿ ತಾಲ್ಲೂಕಿನ ಸರ್ವೆ ನಂ, ೨೪೭ ತಿಗಣಿ ಗ್ರಾಮದಲ್ಲಿ ಕೊಳವೆ ಬಾವಿ ನಿರ್ಮಾಣ | ೦.೯೪ | ೬.೮೦ |
| ೨೯ | ಶಿರಸಿ ತಾಲ್ಲೂಕಿನ ಸರ್ವೆ ನಂ. ೩೭೨ ನರೂರಂ ಗ್ರಾಮದಲ್ಲಿ ಕೊಳವೆ ಬಾವಿ ನಿರ್ಮಾಣ | ೦.೯೨ | ೬.೦೦ |
| | ಪ್ರವರ್ಗ—೨ | | |
| ೩೦ | ಅಂಕೋಲಾ ತಾಲ್ಲೂಕಿನ ಶಿಂಗನಮಕ್ಕಿ ಗ್ರಾಮದಲ್ಲಿ ಕೊಳವೆ ಬಾವಿ ನಿರ್ಮಾಣ | ೦.೯೭ | ೮.೦೦ |
| | ಒಟ್ಟು | ೨೯.೪೪ | ೨೭೦.೦೦ |

ಪಟ್ಟಿ—೨

ಶಿರಸಿ ಮಂತ್ತು ಸಿದ್ದಾಪುರ ತಾಲ್ಲೂಕಿನಲ್ಲಿ ಗಂಗಾ ಕಲ್ಯಾಣ ಯೋಜನೆಯಂಡಿ ಮಂಜೂರಾದ ಕೆಲಸಗಳು

| ಕ್ರಮ ಸಂಖ್ಯೆ | ಕಾಮಗಾರಿ ಹೆಸರಂ | ಅಂದಾಜು ವೆಚ್ಚ ಲಕ್ಷ ರೂ.ಗಳಲ್ಲಿ | ಅಚ್ಚುಕಟ್ಟು ಪ್ರದೇಶ ಹೆಕ್ಟೇರುಗಳಲ್ಲಿ |
|---|---|---|---|
| | ಪ್ರವರ್ಗ—೧ | | |
| ೧ | ಶಿರಸಿ ತಾಲ್ಲೂಕಿನ ಸರ್ವೆನಂ. ೧೪೭ರ ಇನ್ನೂರು ಗ್ರಾಮದಲ್ಲಿ ಕೊಳವೆ ಬಾವಿ ನಿರ್ಮಾಣ | ೦.೯೫ | ೬.೦೦ |
| ೨ | ಶಿರಸಿ ತಾಲ್ಲೂಕಿನ ಸರ್ವೆನಂ ೪೮ ಗೋಣೂರು ಗ್ರಾಮದಲ್ಲಿ ಕೊಳವೆ ಬಾವಿ ನಿರ್ಮಾಣ | ೦.೯೮ | ೬.೦೦ |
| ೩ | ಶಿರಸಿ ತಾಲ್ಲೂಕಿನ ಸರ್ವೆನಂ ೨೭ ವಡ್ಡಲ ಗ್ರಾಮದಲ್ಲಿ ಕೊಳವೆ ಬಾವಿ ನಿರ್ಮಾಣ | ೦.೯೪ | ೬.೦೦ |
| ೪ | ಶಿರಸಿ ತಾಲ್ಲೂಕಿನ ಸರ್ವೆನಂ ೬೨ ಕಿರವತ್ತಿ ಗ್ರಾಮದಲ್ಲಿ ಕೊಳವೆ ಬಾವಿ ನಿರ್ಮಾಣ | ೦.೯೪ | ೬.೦೦ |
| ೫ | ಶಿರಸಿ ತಾಲ್ಲೂಕಿನ ಸರ್ವೆನಂ ೩೯ ಅಚ್ಚನಹಳ್ಳಿ ಗ್ರಾಮದಲ್ಲಿ ಕೊಳವೆ ಬಾವಿ ನಿರ್ಮಾಣ | ೦.೯೪ | ೬.೦೦ |
| ೬ | ಶಿರಸಿ ತಾಲ್ಲೂಕಿನ ಸರ್ವೆನಂ ೪೩ ಕಲ್ಲಕರ್ಡಿ ಗ್ರಾಮದಲ್ಲಿ ಕೊಳವೆ ಬಾವಿ ನಿರ್ಮಾಣ | ೦.೯೬ | ೬.೦೦ |
| ೭ | ಶಿರಸಿ ತಾಲ್ಲೂಕಿನ ಸರ್ವೆನಂ ೨೭ ಬೆಳ್ಳೇನಕೇರಿ ಗ್ರಾಮದಲ್ಲಿ ಕೊಳವೆ ಬಾವಿ ನಿರ್ಮಾಣ | ೦.೯೮ | ೬.೫೦ |
| ೮ | ಶಿರಸಿ ತಾಲ್ಲೂಕು ಸರ್ವೆನಂ ೩೯ ಬೆಳ್ಳೇನಕೇರಿ ಗ್ರಾಮದಲ್ಲಿ ಕೊಳವೆ ಬಾವಿ ನಿರ್ಮಾಣ | ೦.೯೮ | ೭.೦೦ |
| ೯ | ಶಿರಸಿ ತಾಲ್ಲೂಕಿನ ಸರ್ವೆನಂ ೮ ತಿಗಣಿ ಗ್ರಾಮದಲ್ಲಿ ಕೊಳವೆ ಬಾವಿ ನಿರ್ಮಾಣ | ೦.೯೪ | ೬.೦೦ |
| ೧೦ | ಶಿರಸಿ ತಾಲ್ಲೂಕಿನ ಸರ್ವೆನಂ ೨೪೭ ತಿಗಣಿ ಗ್ರಾಮದಲ್ಲಿ ಕೊಳವೆ ಬಾವಿ ನಿರ್ಮಾಣ | ೦.೯೪ | ೬.೦೦ |
| ೧೧ | ಶಿರಸಿ ತಾಲ್ಲೂಕಿನ ಸರ್ವೆನಂ ೩೭೨ ನರೂರು ಗ್ರಾಮದಲ್ಲಿ ಕೊಳವೆ ಬಾವಿ ನಿರ್ಮಾಣ | ೦.೯೨ | ೬.೦೦ |
| | ಒಟ್ಟು | ೧೦.೪೭ | ೬೭.೫೦ |

ಶ್ರೀ ಗೋಪಾಲ ಮುಕುಂದ ಕಾನಡೆ.—ಮಾನ್ಯ ಅಧ್ಯಕ್ಷರೆ, ಗಂಗಾಕಲ್ಯಾಣ ಯೋಜನೆಯನ್ನು ಯಾವ ಜನ ಇದ್ದಲ್ಲಿ ನಿರ್ಮಾಣ ಮಾಡಬೇಕು ? ಒಟ್ಟು ೧೧ರಲ್ಲಿ ಸಿದ್ದಾಪುರ ತಾಲ್ಲೂಕಿನಲ್ಲಿ ಯಾವ ಪಳ್ಳಿಯಲ್ಲಿ ಮಾಡಿದ್ದಾರೆ ? ಸಿರ್ಸಿ ತಾಲ್ಲೂಕಿನಲ್ಲಿ ಒಟ್ಟು ೧೬ ಜನ ಅರ್ಜಿ ಕೊಟ್ಟಿದ್ದರೂ, ಒಂದರಲ್ಲಿ ಮಾತ್ರ ಕೆಲಸ ಮಾಡುತ್ತಿದ್ದಾರೆ. ಅಧಿಕಾರಿಗಳ ಮಾತು ಕೇಳಿಕೊಂಡು ತಾವು ಈ ಹಾರಿಕೆ ಉತ್ತರ ಕೊಡುತ್ತಿದ್ದೀರೇನು ?

ಶ್ರೀ ಹೆಚ್. ಡಿ. ದೇವೇಗೌಡ.—ಸ್ವಾಮಿ, ಒಟ್ಟು ೩೦ ಯೋಜನೆಗಳು ಮಂಜೂರಾಗಿದ್ದು ೨೯ ಯೋಜನೆಗಳು ಪರಿಶಿಷ್ಟ ಜನರ ಪರವಾಗಿ ನಿರ್ಣಯವಾಗಿದೆ. ಒಂದು ಮಾತ್ರ ಹಿಂದುಳಿದವರ್ಗದವರು ಇರತಕ್ಕಂಥಾದ್ದು. ದುರಾದೃಷ್ಟವಶಾತ್ ಈಗ ತೆಗೆದುಕೊಂಡಿರುವಂಥ ಯೋಜನೆಗಳ ಪೈಕಿ ೧೧ ಯೋಜನೆಗಳು ಫೇಲಾಗಿವೆ. ನೀರು ಬರಂತ್ತಿಲ್ಲ. ಈ ವಿಚಾರದಲ್ಲಿ ಪುನಃ ಆದೇಶ ಕೊಟ್ಟು ಪೆರಿನಿಯಲ್ ವಾಟರ್ ಸೋರ್ಸ ಇದ್ದ ಪಕ್ಷದಲ್ಲಿ ಗಂಗಾಕಲ್ಯಾಣ ಯೋಜನೆ ವ್ಯಾಪ್ತಿಯಲ್ಲಿ ಕೊಡುವುದಕ್ಕೆ ಸಾಧ್ಯವೇ ಎಂದು ಪರಿಶೀಲನೆ ಮಾಡಿ ಎಂದು ಹೇಳಿದ್ದೇನೆ. ತಾವು ಒಂದು ಪಟ್ಟಿ ಕೊಡಿ ಪೆರಿನಿಯಲ್ ವಾಟರ್ ಸೋರ್ಸ ಇದ್ದರೆ ಗಂಗಾಕಲ್ಯಾಣ ಯೋಜನೆಯಡಿಯಲ್ಲಿ ಪರಿಶಿಷ್ಟ ಜಾತಿಯವರಿಗೆ ಅನುಕೂಲ ಮಾಡಿಕೊಡುವುದಕ್ಕೆ ಇಲ್ಲಿಯೇ ಒಪ್ಪಿಕೊಳ್ಳುತ್ತೇನೆ.

ಶ್ರೀ ಗೋಪಾಲ ಮುಕುಂದ ಕಾನಡೆ.—ಸ್ವಾಮಿ, ಸಿದ್ದಾಪುರ ತಾಲ್ಲೂಕಿನಲ್ಲಿ ಇವರ ಇಲಾಖೆಯೇ ಇಲ್ಲ, ಸಿದ್ದಾಪುರ ತಾಲ್ಲೂಕಿನ ಒಂದು ಊರಾಗಲೀ, ಒಂದು ಸರ್ವೆ ನಂಬರಾಗಲೀ, ಇಲ್ಲ. ಒಂದು ಅರ್ಜಿ ಬಂದಿದೆಯೆಂ ಅದನ್ನು ಕೊಡಿ.

ಶ್ರೀ ಹೆಚ್. ಡಿ. ದೇವೇಗೌಡ.—ನಿಗ್ಗೋಡು, ಸಿದ್ದಾಪುರ ತಾಲ್ಲೂಕು, ಕಂಚನೂರು ಸಿದ್ದಾಪುರ ತಾಲ್ಲೂಕು,

ಶ್ರೀ ಗೋಪಾಲ ಮುಕುಂದ ಕಾನಡೆ.—ಸಿದ್ದಾಪುರ ತಾಲ್ಲೂಕು ಅಲ್ಲ.

ಶ್ರೀ ಹೆಚ್. ಡಿ. ದೇವೇಗೌಡ —ಸ್ವಾಮಿ, ಈ ಊರುಗಳು ಯಾವ ತಾಲ್ಲೂಕಿಗೆ ಸೇರಿವೆ ಎಂಬ ಬಗ್ಗೆ ತಹಶೀಲ್ದಾರ್‌ರವರಿಂದ ವರದಿ ತರಿಸಿಕೊಳ್ಳುತ್ತೇನೆ.

ಶ್ರೀ ಗೋಪಾಲ ಮುಕುಂದ ಕಾನಡೆ.—ನಿಮ್ಮ ಇಲಾಖೆ ನಮ್ಮಲ್ಲಿ ಇಲ್ಲ, ಒಬ್ಬ ಅಧಿಕಾರಿ ಇಲ್ಲ ಹೊನ್ನಾವರದಲ್ಲಿ ಇದ್ದಾರೆ. ಅಲ್ಲಿ ಟೂರು ಮಾಡುತ್ತಿದ್ದಾರೆ.

ಅಧ್ಯಕ್ಷರು —ಆಯೇತು ಕುಳಿತುಕೊಳ್ಳಿ.

ಶ್ರೀ ಗೋಪಾಲ ಮುಕುಂದ ಕಾನಡೆ.—ಸ್ವಾಮಿ, ಜನರ ಸಮಸ್ಯೆ ಇದೆ.

ಅಧ್ಯಕ್ಷರು.—ಇನ್ನು ೧೨ ಪ್ರಶ್ನೆಗಳು ಇವೆ. ಹೀಗೆ ಮಾಡಿದರೆ ಆ ಪ್ರಶ್ನೆಗಳನ್ನು ಲ್ಯಾಪ್ಸ್ ಮಾಡಬೇಕಾಗುತ್ತದೆ.

ಶ್ರೀ ಹೆಚ್ ಡಿ ದೇವೇಗೌಡ.—ಸ್ವಾಮಿ, ಅಧಿಕಾರಿಗಳು ಇವರ ತಾಲ್ಲೂಕಿನಲ್ಲಿ ಇಲ್ಲ ಎನ್ನುವ ಪ್ರಶ್ನೆ ಮುಖ್ಯವಲ್ಲ. ಒಂದು ಡಿವಿಜನ್ ಆಫೀಸ್ ೭ ತಾಲ್ಲೂಕುಗಳನ್ನು ನೋಡಿಕೊಳ್ಳಬೇಕಾಗಿದೆ. ೩ ತಾಲ್ಲೂಕುಗಳಿಗೆ ಒಂದು ಸಬ್ ಡಿವಿಜನ್ ಇದೆ. ನಿಮ್ಮ ತಾಲ್ಲೂಕಿನಲ್ಲಿ ೧೦ ರಿಗ್ ಫೇಲ್ಯೂರ್ ಆಗಿದೆ. ಈ ಸದನದಲ್ಲಿಯೇ ನೀವು ಪಟ್ಟಿ ಕೊಡಿ. ನಾನು ನೋಡುತ್ತೇನೆ.

## ಮುಧೋಳ ತಾಲ್ಲೂಕಿನಲ್ಲಿರುವ ಘಟಪ್ರಭಾ ನದಿಗೆ ಆಡ್ಡಲಾಗಿ ಬ್ಯಾರೇಜಿನ ನಿರ್ಮಾಣ

೫೫೬. ಶ್ರೀ ಬಿ. ಜಿ. ಜಮಖಂಡಿ (ಮುಧೋಳ).—ಮಾನ್ಯ ಲೋಕೋಪಯೋಗಿ ಆಚ್ಚುಕಟ್ಟು ಪ್ರದೇಶಾಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮುಧೋಳ್ ತಾಲ್ಲೂಕು ಮುದ್ದಾಪುರ ಹತ್ತಿರ ಘಟಪ್ರಭಾ ನದಿಗೆ ಕಟ್ಟುವ ಬ್ಯಾರೇಜಿಗೆ ಯಾವಾಗ ಮಂಜೂರಾತಿ ನೀಡಲಾಗಿದ್ದಿತು,

ಆ) ಆದರ ಅಂದಾಜು ವೆಚ್ಚ ಎಷ್ಟು ?

ಇ) ಬ್ಯಾರೇಜ್ ನಿರ್ಮಾಣದಲ್ಲಿ ವಿಳಂಬವಾಗಿರುವುದಕ್ಕೆ ಕಾರಣವೇನು,

ಈ) ಅದು ಯಾವಾಗ ಪೂರ್ತಿಗೊಳ್ಳುವುದು ?

ಶ್ರೀ ಹೆಚ್. ಡಿ. ದೇವೇಗೌಡ(ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಫೆಬ್ರುವರಿ ೧೯೭೫ರಲ್ಲಿ ಮಂಜೂರಾಗಿದೆ.